NOVEMBER 04, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

- 2026ರ ಮಾರ್ಚ್ ವೇಳೆಗೆ, ರಾಜ್ಯದಿಂದ, 2 ಸಾವಿರದ ನಾಲ್ಕು ನೂರು ಮೆಗಾ ವ್ಯಾಟ್, ಸೌರ ವಿದ್ಯುತ್ ಉತ್ಪಾದನೆ ಗುರಿ.
- ಮೈಸೂರಿನಲ್ಲಿ, ಅಂತಾರಾಷ್ಟ್ರೀಯ ಗುಣಮಟ್ಟದ ಚಿತ್ರನಗರಿ ಸ್ಥಾಪನೆ.
- ಸುವರ್ಣ ಸಂಭ್ರಮದಲ್ಲಿ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ; ಇಂದು ಹುಬ್ಬಳ್ಳಿಯಲ್ಲಿ ವಿಶೇಷ ಕಾರ್ಯಕ್ರಮ.
- ಸೈಬರ್ ವಂಚನೆ; ಜನಸ್ನೇಹಿ ಪೊಲೀಸರ ಸಹಾಯ ಪಡೆಯಲು, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರ, ಮನವಿ.

<><><>

ಈಗ ವಾರ್ತೆಗಳ ವಿವರ

<><><>

2026ರ ಮಾರ್ಚ್ ತಿಂಗಳಾಂತ್ಯಕ್ಕೆ, ಸೌರ ವಿದ್ಯುತ್ ಘಟಕಗಳಿಂದ, 2 ಸಾವಿರದ ನಾಲ್ಕು ನೂರು ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸುವ ಗುರಿ ಸಾಧಿಸಲಾಗುವುದು ಎಂದು, ಇಂಧನ ಖಾತೆ ಸಚಿವ, ಕೆ.ಜೆ. ಜಾರ್ಜ್ ತಿಳಿಸಿದ್ದಾರೆ. ಹಾಸನ ಜಿಲ್ಲೆ, ಅರಸೀಕೆರೆ ತಾಲೂಕು, ಅಗ್ಗುಂದ ಗ್ರಾಮದಲ್ಲಿ, ನೂತನ ವಿದ್ಯುತ್ ಉಪ ಕೇಂದ್ರವನ್ನು ಉದ್ಘಾಟಿಸಿ, ಮಾತನಾಡಿದರು. ರೈತರಿಗೆ ಹಗಲು ಹೊತ್ತು, ಏಳು ಗಂಟೆ ಥ್ರೀ ಫೇಸ್ ವಿದ್ಯುತ್ ಪೂರೈಸಲು, ಕ್ರಮ ಕೈಗೊಳ್ಳಲಾಗುತ್ತಿದೆ. 'ನಿರಂತರ ಜ್ಯೋತಿ' ಯೋಜನೆಯಡಿ, ಗೃಹ ಬಳಕೆಗೆ, ಸಿಂಗಲ್ ಫೇಸ್ ವಿದ್ಯುತ್ ಪೂರೈಸಲು, ನಿಗಮಗಳಿಗೆ ಸೂಚಿಸಲಾಗಿದೆ. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಿಂದ, ರಾಜ್ಯಾದ್ಯಂತ 100 ಹೊಸ ವಿದ್ಯುತ್ ಉಪ ಕೇಂದ್ರಗಳನ್ನು ನಿರ್ಮಿಸಲಾಗುತ್ತಿದೆ ಎಂದು, ಸಚಿವ ಕೆ.ಜೆ. ಜಾರ್ಜ್ ವಿವರಿಸಿದರು.

<><><>

ಅಂತಾರಾಷ್ಟ್ರೀಯ ಗುಣಮಟ್ಟದ, ಚಿತ್ರನಗರಿ, ಮೈಸೂರಿನಲ್ಲಿ ನಿರ್ಮಿಸಲಾಗುವುದು ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ರಾಜ್ಯ ಮುಕ್ತ ವಿಶ್ವವಿದ್ಯಾಲಯದ, ಘಟಿಕೋತ್ಸವ ಭವನದಲ್ಲಿ, 2018–19 ನೇ ಸಾಲಿನ, ಚಲನಚಿತ್ರ ಪ್ರಶಸ್ತಿಗಳನ್ನು ಪ್ರದಾನಿಸಿ, ಅವರು ಮಾತನಾಡಿದರು. ಚಿತ್ರನಗರಿಗಾಗಿ, 160 ಎಕರೆ ಜಾಗೆಯನ್ನು, ಈಗಾಗಲೇ ವಾರ್ತಾ ಇಲಾಖೆಗೆ ಹಸ್ತಾಂತರಿಸಲಾಗಿದೆ, 2026ರ ಜನೆವರಿ ಒಳಗೆ, ವಿಸ್ತೃತ ಯೋಜನಾ ವರದಿ ಸಿದ್ಧಗೊಂಡು, ಆದಷ್ಟು ಬೇಗ, ನಿರ್ಮಾಣ ಕಾರ್ಯ ಆರಂಭವಾಗಲಿದೆ ಎಂದರು.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ ಧ್ವನಿ 30 ಸೆಕೆಂದುಗಳು

<><><>

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ, 8 ಜನ ಕನ್ನಡ ಸಾಹಿತಿಗಳ, ಹುಟ್ಟೂರು ಅಭಿವೃದ್ಧಿಪಡಿಸಿ, ಚಿರಸ್ಥಾಯಿಯಾಗಿಸಲು, ಗ್ರಾಮೀಣಾಭಿವೃದ್ಧಿ ಇಲಾಖೆ, ತಲಾ ಒಂದು ಕೋಟಿ ರೂಪಾಯಿ ವಿನಿಯೋಗಿಸಲಿದೆ ಎಂದು, ಸಚಿವ ಪ್ರಿಯಾಂಕ ಖರ್ಗೆ ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ. ಕನ್ನಡ ನಾಡು–ನುಡಿಯ ಶ್ರೀಮಂತಿಕೆ ಹೆಚ್ಚಿಸಿದ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರನ್ನು, ವಿಶಿಷ್ಟವಾಗಿ ಗೌರವಿಸಲು, ಸರ್ಕಾರ ತೀರ್ಮಾನಿಸಿದೆ. ಮಹನೀಯರು ಹುಟ್ಟಿದ ಸ್ಥಳ, ಅವರು ಬೆಳೆದ ಪರಿಸರ, ಅವರ ಹೆಜ್ಜೆ ಗುರುತುಗಳಿರುವ ಸ್ಥಳಗಳನ್ನು ಗುರುತಿಸಿ, ಆಯಾ ಗ್ರಾಮಗಳ ಸಮಗ್ರ ಅಭಿವೃದ್ಧಿಗೆ ಒತ್ತು ನೀಡಲಾಗುತ್ತದೆ ಎಂದಿದ್ದಾರೆ.

<><><>

ಗದಗ ಜಿಲ್ಲೆಯಲ್ಲಿ, 2025–26ನೇ ಸಾಲಿನ, ಮುಂಗಾರು ಹಂಗಾಮಿನ ಬೆಳೆ ಹಾನಿ ಪರಿಹಾರ, 91 ಕೋಟಿ ರೂಪಾಯಿಗಳನ್ನು, ನೇರ ನಗದು ವರ್ಗಾವಣೆ ಮೂಲಕ, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ, ವಿತರಿಸಿದರು. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಪರಿಹಾರ ವಿತರಣೆಗೆ ಚಾಲನೆ ನೀಡಿ, ಮಾತನಾಡಿದ ಸಚಿವರು, ಗದಗ ಹಾಗೂ ಶಿರಹಟ್ಟಿ ತಾಲೂಕಿನ ರೈತರಿಗೆ, 21 ಕೋಟಿ ರೂಪಾಯಿ, ನರಗುಂದ ಹಾಗೂ ರೋಣ ತಾಲೂಕಿನ ಬೆಳೆ ಹಾನಿ ಪರಿಹಾರ, 55 ಕೋಟಿ ರೂಪಾಯಿ ವಿತರಿಸಲಾಗಿದೆ. ತೋಟಗಾರಿಕೆ ಬೆಳೆ ಹಾನಿ ಸಮೀಕ್ಷೆ ಕೈಗೊಂಡು, ಜಿಲ್ಲೆಯ 18 ಸಾವಿರದ 540 ತೋಟಿಗರಿಗೆ, ಪರಿಹಾರ ವಿತರಿಸಲಾಗುವುದು ಎಂದು, ತಿಳಿಸಿದರು.

<><><>

ಕಬ್ಬು ಬೆಳೆಗಾರರ ಹಿತದೃಷ್ಟಿಯಿಂದ, ಪ್ರತಿ ಟನ್ ಕಬ್ಬಿಗೆ, ಕನಿಷ್ಟ ಮೂರು ಸಾವಿರ ರೂಪಾಯಿ ನಿಗದಿ ಪಡಿಸಿ, ಮುಂದಿನ ಎರಡು ದಿನಗಳಲ್ಲಿ, ಕಬ್ಬು ಅರೆಯುವ ಕಾರ್ಯ ಆರಂಭಿಸುವಂತೆ, ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ ಸೂಚಿಸಿದ್ದಾರೆ. ಕಲಬುರಗಿ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಕಲಬುರಗಿ ಜಿಲ್ಲೆಯ, ಸಕ್ಕರೆ ಕಾರ್ಖಾನೆ ಪ್ರತಿನಿಧಿಗಳು ಹಾಗೂ ರೈತ ಮುಖಂಡರೊಂದಿಗೆ ಅವರು, ಸಭೆ ನಡೆಸಿದರು. ಬೆಳಗಾವಿ ಜಿಲ್ಲೆ ಕಬ್ಬು ಬೆಳೆಗಾರರಿಗೆ, ಪ್ರತಿ ಟನ್ ಕಬ್ಬಿಗೆ 3 ಸಾವಿರದ ನಾಲ್ಕು ನೂರು ರೂಪಾಯಿ ದರ ನಿಗದಿ ಪಡಿಸಿ, ಸಕ್ಕರೆ ಕಾರ್ಖಾನೆಗಳು ಘೋಷಿಸಿವೆ. ವಿಜಯಪುರ, ಬಾಗಲಕೋಟೆ ಹಾಗೂ ಕಾರವಾರ ಜಿಲ್ಲೆಯಲ್ಲೂ ದರ ಘೋಷಿಸಲಾಗಿದೆ ಎಂದರು.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರಿಯುವುದು.

(ಧ್ವನಿ: 56 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ

<><><>

ಕೇಂದ್ರದ ಪಿಂಚಣಿ ಇಲಾಖೆ, ದೇಶಾದ್ಯಂತ ನಾಲ್ಕನೇ ಆವೃತ್ತಿಯ, ಪಿಂಚಣಿದಾರರಿಂದ, ಡಿಜಿಟಲ್ ಲೈಫ್ ಸರ್ಟಿಫಿಕೇಟ್ – ಜೀವಿತ ಪ್ರಮಾಣಪತ್ರ ಸಲ್ಲಿಕೆ ಅಭಿಯಾನವನ್ನು, ಈ ತಿಂಗಳಾಂತ್ಯದ ವರೆಗೆ ಆಯೋಜಿಸಿದೆ. ದೇಶದ 2 ಸಾವಿರ ನಗರಗಳಲ್ಲಿ ಈ ಅಭಿಯಾನ ನಡೆಯಲಿದೆ. ಮೈಸೂರು ಪ್ರಧಾನ ಅಂಚೆ ಕಚೇರಿಯಲ್ಲಿ, ಇಂದು ಬೆಳಗ್ಗೆ 10 ಗಂಟೆಗೆ, ಜೀವಿತ ಪ್ರಮಾಣ ಪತ್ರ ಸಲ್ಲಿಕೆ ಅಭಿಯಾನದ ಅಂಗವಾಗಿ, ಕಾರ್ಯಕ್ರಮ ಜರುಗಲಿದೆ. ಕೇಂದ್ರ ಸರ್ಕಾರ, 2 ಕೋಟಿ ಪಿಂಚಣಿದಾರರಿಂದ, ಜೀವಿತ ಪ್ರಮಾಣಪತ್ರ ಪಡೆದು, ಡಿಜಿಟಲೀಕರಿಸುವ, ಗುರಿ ಹೊಂದಿದೆ.

<><><>

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಸ್ಥಾಪನೆಗೊಂಡು ಸುವರ್ಣ ಮಹೋತ್ಸವದ ಸಂಭ್ರಮದಲ್ಲಿದೆ. ಧಾರವಾಡ, ಗದಗ ಹಾಗೂ ಉತ್ತರಕನ್ನಡ ಜಿಲ್ಲೆಗಳ, ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಕೇಂದ್ರಗಳ ಸಹಯೋಗದಲ್ಲಿ, ಇಂದು ಮಧ್ಯಾಹ್ನ 2.30 ಕ್ಕೆ, ಹುಬ್ಬಳ್ಳಿಯ ನೆಹರೂ ಮೈದಾನದಲ್ಲಿ, 50ನೇ ವರ್ಷದ ಸಂಭ್ರಮಾಚರಣೆ ಜರುಗಲಿದೆ. ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ಹಾಗೂ ವಿಧಾನ ಪರಿಷತ್ ಸಭಾಪತಿ, ಬಸವರಾಜ ಹೊರಟ್ಟಿ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಸುವರ್ಣ ಸಂಭ್ರಮದ ಕುರಿತು, ಮಾಲಿನ್ಯ ನಿಯಂತ್ರಣ ಮಂಡಳಿಯ, ಧಾರವಾಡ ಪ್ರಾದೇಶಿಕ ಕಚೇರಿಯ, ಪರಿಸರ ಅಧಿಕಾರಿ ಐ.ಎಚ್. ಜಗದೀಶ, ಮಾಹಿತಿ ನೀಡಿದ್ದಾರೆ.

<><><>

ಐ.ಎಚ್. ಧ್ವನಿ ಜಗದೀಶ 69 ಸೆಕೆಂದುಗಳು

<><><>

ಸೈಬರ್ ವಂಚನೆ ಹಾಗೂ ಅಪರಿಚಿತ ವ್ಯಕ್ತಿಗಳಿಂದ ತೊಂದರೆಗೊಳಗಾದ ತುರ್ತು ಸಂದರ್ಭಗಳಲ್ಲಿ, ಮಹಿಳೆಯರು, ವಿದ್ಯಾರ್ಥಿನಿಯರು ಎದೆಗುಂದದೆ, ಪೊಲೀಸರ ಸಹಾಯ ಪಡೆಯಬೇಕು ಎಂದು, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಕೋರಿದ್ದಾರೆ. ಹಾಸನದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸಭಾಂಗಣದಲ್ಲಿ, ವಿದ್ಯಾರ್ಥಿಗಳೊಂದಿಗೆ ಅವರು, ಸಂವಾದ ನಡೆಸಿದರು. ತುರ್ತು ಸಹಾಯವಾಣಿ ಸಂಖ್ಯೆ 1–1–2, ಮಹಿಳಾ ಸಹಾಯವಾಣಿ 1–8–1 ಹಾಗೂ ಸೈಬರ್ ಸಹಾಯವಾಣಿ 1–9–0–8ಕ್ಕೆ ಕರೆ ಮಾಡಿ, ಸ್ವಯಂ ರಕ್ಷಣೆಗೆ ಮುಂದಾಗುವಂತೆ, ತಿಳಿಸಿದರು.

<><><>

ಆರ್ಥಿಕತೆ, ಕೃಷಿ ಹಾಗೂ ಆರೋಗ್ಯ ಕ್ಷೇತ್ರದಲ್ಲಿ, ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಸಿ, ಪರಿಹಾರ ಕಂಡುಕೊಳ್ಳಲು, ಧಾರವಾಡದ ಭಾರತೀಯ ತಂತ್ರಜ್ಞಾನ ಸಂಸ್ಥೆ–ಐ.ಐ.ಟಿ., ಧರ್ತಿ ಇನ್‌ಕ್ಯೂಬೇಷನ್ ಕೇಂದ್ರದಲ್ಲಿ, 'ದ್ವಾರಾ ಹೋಲ್ಡಿಂಗ್ಸ್' ಆರಂಭಿಸಿದೆ ಎಂದು, ನವೋದ್ಯಮದ ಸಹ ಸ್ಥಾಪಕ ಸಮೀರ್ ಶಾ ತಿಳಿಸಿದ್ದಾರೆ. 'ದ್ವಾರಾ ಸೆಂಟರ್ ಆಫ್ ಎ.ಐ. ಫೈನಾನ್ಶಿಯಲ್ ಇನ್‌ಕ್ಲೂಜನ್', ಕಂಪ್ಯೂಟರ್ ಆಧಾರಿತ, ದೂರ ಸಂವೇದಿ ತಂತ್ರಜ್ಞಾನದ ಬಳಸಿಕೊಂಡು, ಕಾರ್ಯ ನಿರ್ವಹಿಸಲಿದೆ ಎಂದರು.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲೂಕು, ನವನಗರದ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ 7ನೇ ಘಟಿಕೋತ್ಸವ, ನಾಳೆ ಬೆಳಗ್ಗೆ 11.30 ಕ್ಕೆ, ಧಾರವಾಡ ಕೃಷಿ ವಿಶ್ವವಿದ್ಯಾಲಯದ, ರೈತರ ಜ್ಞಾನಾಭಿವೃದ್ಧಿ ಕೇಂದ್ರದಲ್ಲಿ, ಜರುಗಲಿದೆ ಎಂದು, ಉಪ ಕುಲಪತಿ ಸಿ.ಬಸವರಾಜು ತಿಳಿಸಿದ್ದಾರೆ. ಆಂಧ್ರಪ್ರದೇಶ ರಾಜ್ಯಪಾಲ, ಎಸ್.ಅಬ್ದುಲ್ ನಜೀರ್ ಹಾಗೂ ಹಿರಿಯ ನ್ಯಾಯವಾದಿ ವಿ. ಸುದೇಶ ಪೈ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಗುವುದು ಎಂದರು. ಶೈಕ್ಷಣಿಕ ವರ್ಷ 2023 ಹಾಗೂ 2024ನೇ ಸಾಲಿನ, ಒಟ್ಟು 7 ಸಾವಿರದ 716 ವಿದ್ಯಾರ್ಥಿಗಳಿಗೆ, ಘಟಿಕೋತ್ಸವದಲ್ಲಿ ಪದವಿ ಪ್ರದಾನ ಮಾಡಲಾಗುವುದು ಎಂದು ಹೇಳಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- 2026ರ ಮಾರ್ಚ್ ವೇಳೆಗೆ, ರಾಜ್ಯದಿಂದ, 2 ಸಾವಿರದ ನಾಲ್ಕು ನೂರು ಮೆಗಾ ವ್ಯಾಟ್, ಸೌರ ವಿದ್ಯುತ್ ಉತ್ಪಾದನೆ ಗುರಿ.
- ಮೈಸೂರಿನಲ್ಲಿ, ಅಂತಾರಾಷ್ಟ್ರೀಯ ಗುಣಮಟ್ಟದ ಚಿತ್ರನಗರಿ ಸ್ಥಾಪನೆ.
- ಸುವರ್ಣ ಸಂಭ್ರಮದಲ್ಲಿ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ; ಇಂದು ಹುಬ್ಬಳ್ಳಿಯಲ್ಲಿ ವಿಶೇಷ ಕಾರ್ಯಕ್ರಮ.
- ಸೈಬರ್ ವಂಚನೆ; ಜನಸ್ನೇಹಿ ಪೊಲೀಸರ ಸಹಾಯ ಪಡೆಯಲು, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರ, ಮನವಿ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ

<><><>